ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : 2014–15ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಗೆ ಮೂರನೇ ಪೂರಕ ಅಂದಾಜಿನಲ್ಲಿ ಅನುದಾನ ಬಿಡುಗಡೆ ಮಾಡುವ – ಕುರಿತು.

ಓದಲಾಗಿದೆ: 1) ಸರ್ಕಾರಿ ಪತ್ರ ಸಂಖ್ಯೆ : ಗ್ರಾಅಪ/21/ಜೈಅಯೋ/2014 ದಿನಾಂಕ: 19.07.2014

2) ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ/43/ಜೈಅಯೋ/2014, ಬೆಂಗಳೂರು, ದಿನಾಂಕ 02.09.2014

3) ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ/43/ಜೈಅಯೋ/2014, ಬೆಂಗಳೂರು, ದಿನಾಂಕ 03.03.2015

*****

**ಪ್ರಸ್ತಾವನೆ :**

2014–15ನೇ ಸಾಲಿನ ರಾಜ್ಯ ಆಯವ್ಯಯದಡಿ, ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಗೆ ₹ 130.00 ಲಕ್ಷಗಳ ಅನುದಾನ ನಿಗದಿಪಡಿಸಲಾಗಿದೆ. 2014–15ನೇ ಸಾಲಿನಲ್ಲಿ ಉಲ್ಲೇಖ (1)ರ ಸರ್ಕಾರಿ ಪತ್ರದ ಪ್ರಕಾರ ರೂ.200.00ಲಕ್ಷ ಹೆಚ್ಚುವರಿ ಅನುದಾನವನ್ನಾಗಿ ಆರ್ಥಿಕ ಇಲಾಖೆಯು ಒದಗಿಸಿದ್ದು, ಈ ಪೈಕಿ ಉಲ್ಲೇಖ (2 ಮತ್ತು 3)ರ ಸರ್ಕಾರಿ ಆದೇಶದಲ್ಲಿ ಮೊದಲನೇ ಪೂರಕ ಅಂದಾಜಿನ ರೂ.100.00ಲಕ್ಷಗಳನ್ನು ಬಿಡುಗಡೆ ಮಾಡಿರುತ್ತದೆ.

ಆದುದರಿಂದ ಬಾಕಿ ಉಳಿದ ₹ 100.00ಲಕ್ಷಗಳನ್ನು ಮೂರನೇ ಪೂರಕ ಅಂದಾಜಿನಲ್ಲಿ ಕರ್ನಾಟಕ ಜೈವಿಕ ಇಂಧನ ನೀತಿ ಅನುಷ್ಠಾನಕ್ಕಾಗಿ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಗೆ ಲೆಕ್ಕ ಶೀರ್ಷಿಕೆ 2501–04–105–0–03–059 (ಯೋಜನೆ)ರಡಿ ಬಿಡುಗಡೆ ಮಾಡಲು ಸರ್ಕಾರ ತೀರ್ಮಾನಿಸಿದೆ ಪ್ರಯುಕ್ತ ಈ ಆದೇಶ.

## ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/21/ಜೈಅಯೋ/2014 ಬೆಂಗಳೂರು, ದಿನಾಂಕ 27.03.2015

ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ, ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ, ಬೆಂಗಳೂರು ರವರಿಗೆ ಲೆಕ್ಕ ಶೀರ್ಷಿಕೆ 2501–04–105–0–03–059 (ಯೋಜನೆ)ರಡಿ ₹ **100.00ಲಕ್ಷಗಳನ್ನು (ರೂ. ನೂರು ಲಕ್ಷಗಳು ಮಾತ್ರ)** ಮೂರನೇ ಪೂರಕ ಅಂದಾಜಿನಲ್ಲಿ ಜೈವಿಕ ಇಂಧನ ಅಭಿವೃದ್ಧಿಗಾಗಿ ಮಾತ್ರ ವಿನಿಯೋಗಿಸಲು ಈ ಕೆಳಕಂಡ ನಿಬಂಧನೆಗೊಳಪಟ್ಟು ಬಿಡುಗಡೆ ಮಾಡಿದೆ.

ಸದರಿ ಅನುದಾನವು ಹಂಗಾಮಿಯಾಗಿದ್ದು, ಮಹಾಲೇಖಪಾಲರ ಲೆಕ್ಕ ತಪಾಸಣೆಗೊಳಪಟ್ಟಿದ್ದು, ಉದ್ದೇಶಿತ ಕಾರ್ಯಕ್ರಮಕ್ಕಾಗಿ ವಿನಿಯೋಗಿಸತಕ್ಕದ್ದು.

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ, ಬೆಂಗಳೂರು ರವರು ಗ್ರಾಂಟ್–ಇನ್–ಏಡ್ ಬಿಲ್ಲುನ್ನು ಸಲ್ಲಿಸಿ, ನಿರ್ದೇಶಕರು (ಗ್ರಾಮೂಸೌ–2) ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿರವರ ಮೇಲು ರುಜು ಪಡೆದು ಖಜಾನೆಯಿಂದ ಅನುದಾನವನ್ನು ಪಡೆಯತಕ್ಕದ್ದು. ಬಿಡುಗಡೆ ಮಾಡಲಾಗಿರುವ ಅನುದಾನಕ್ಕೆ ವೆಚ್ಚದ ವಿವರಗಳನ್ನು ಸರ್ಕಾರಕ್ಕೆ ನಿಗದಿತವಾಗಿ ಸಲ್ಲಿಸುವುದು.

ಹಾಲಿ ಬಿಡುಗಡೆ ಮಾಡಲಾಗುತ್ತಿರುವ ಅನುದಾನವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ/138/ ವೆಚ್ಚ-6/2014 ದಿನಾಂಕ 16.03.2015ರಲ್ಲಿ ಸಹಮತಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎನ್. ಕೃಷ್ಣಪ್ಪ)
ನಿರ್ದೇಶಕರು (ಗ್ರಾಮೂಸೌ-2) ~~ಹಾಗೂ~~
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರುಗಳಿಗೆ :

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು
2. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ, ಬೆಂಗಳೂರು.
4. ಉಪ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು
5. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು (ಪಂ.ರಾಜ್) ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
7. ಉಪ ನಿರ್ದೇಶಕರು (ತಾಂತ್ರಿಕ), ರಸ್ತೆ ಮತ್ತು ಸೇತುವೆ ವಿಭಾಗ, ಗ್ರಾ. ಮತ್ತು ಪಂ. ರಾಜ್ ಇಲಾಖೆ.
8. ಉಪ ನಿರ್ದೇಶಕರು, ಟ್ರೆಜರಿ ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, ಖನಿಜ ಭವನ, ಬೆಂಗಳೂರು.
9. ಕಛೇರಿ ಕಡತಕ್ಕೆ / ಹೆಚ್ಚುವರಿ ಪ್ರತಿ.